# ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ

## Directorate of Medical Education.

ಆನಂದರಾವ್ ವೃತ್ತ, ಬೆಂಗಳೂರು-9

Ananda Rao Circle, Bangalore-9

mail: dmekarnataka@yahoo.com

ಸಂಖ್ಯೆ: ವೈಶಿನಿ/ಎನ್‌ಆರ್‌ಸಿ(1)/40/2017-18 ದಿನಾಂಕ: 29-12-2018

**ಸುತ್ತೋಲೆ**

**ವಿಷಯ:-** 2018-19ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಜಿ.ಎನ್.ಎಂ. ಪಿ.ಬಿ.ಬಿಎಸ್ಸಿ, ಬಿಎಸ್ಸಿ, ಎಂ.ಎಸ್ಸಿ ನರ್ಸಿಂಗ್ ಮತ್ತು ಬಿ.ಪಿ.ಟಿ ಎಂ.ಪಿ.ಟಿ ಪ್ಯಾರಾ ಮೆಡಿಕಲ್ ಅಲೈಡ್ ಸೈನ್ಸ್ ಕೋರ್ಸ್‌ಗಳಲ್ಲಿ ಸರ್ಕಾರಿ ಕೋಟಾದಡಿಯಲ್ಲಿ ಖಾಲಿ ಉಳಿದಿರುವ ಸೀಟುಗಳನ್ನು ಆಡಳಿತ ಮಂಡಳಿಯಿಂದ ಭರ್ತಿಮಾಡಿಕೊಳ್ಳಲು ಅನುಮತಿ ನೀಡುವ ಬಗ್ಗೆ.

**ಉಲ್ಲೇಖ:-** ಖಾಸಗಿ ನರ್ಸಿಂಗ್ / ಬಿಪಿಟಿ/ ಎಂಪಿಟಿ/ ಪ್ಯಾರಾ ಮೆಡಿಕಲ್ ಮತ್ತು ಅಲೈಡ್ ಹೆಲ್ತ್ ಸೈನ್ಸ್ ಶಿಕ್ಷಣ ಸಂಸ್ಥೆಗಳ ಮನವಿ.

* * * *

2018-19ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಜಿ.ಎನ್.ಎಂ. ಪಿ.ಬಿ.ಬಿಎಸ್ಸಿ, ಬಿಎಸ್ಸಿ, ಎಂ.ಎಸ್ಸಿ ನರ್ಸಿಂಗ್ ಮತ್ತು ಬಿ.ಪಿ.ಟಿ ಎಂ.ಪಿ.ಟಿ ಪ್ಯಾರಾ ಮೆಡಿಕಲ್ ಅಲೈಡ್ ಸೈನ್ಸ್ ಕೋರ್ಸ್‌ಗಳಲ್ಲಿ ಸರ್ಕಾರಿ ಕೋಟಾದಡಿಯಲ್ಲಿ ಖಾಲಿ ಉಳಿದಿರುವ ಸೀಟುಗಳನ್ನು ಆಡಳಿತ ಮಂಡಳಿಯಿಂದ ಭರ್ತಿಮಾಡಿಕೊಳ್ಳಲು ಅನುಮತಿ ನೀಡುವಂತೆ ಉಲ್ಲೇಖಿತ ಪತ್ರದಲ್ಲಿ ಮನವಿ ಮಾಡಿರುವುದರಿಂದ ಸರ್ಕಾರಿ ಕೋಟಾದಲ್ಲಿ ಖಾಲಿ ಉಳಿದಿರುವ ಸೀಟುಗಳಿಗೆ ಮಾತ್ರ ಆಡಳಿತ ಮಂಡಳಿಯಿಂದ ನಿಗಧಿತ ದಿನಾಂಕದೊಳಗೆ ಭರ್ತಿಮಾಡಿಕೊಳ್ಳಲು ಈ ಕೆಳಕಂಡ ಷರತ್ತಿಗೊಳಪಟ್ಟು ಅನುಮತಿ ನೀಡಿದೆ.

1. 2018-19ನೇ ಸಾಲಿನಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿನ ಸರ್ಕಾರಿ ಕೋಟಾದ ಸೀಟುಗಳಿಗೆ ಜಿ.ಎನ್.ಎಂ. ಪಿ.ಬಿ.ಬಿಎಸ್ಸಿ, ಬಿಎಸ್ಸಿ, ಎಂ.ಎಸ್ಸಿ ನರ್ಸಿಂಗ್ ಮತ್ತು ಬಿ.ಪಿ.ಟಿ ಎಂ.ಪಿ.ಟಿ ಪ್ಯಾರಾ ಮೆಡಿಕಲ್ ಅಲೈಡ್ ಸೈನ್ಸ್ ಕೋರ್ಸ್‌ಗಳಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಮತ್ತು ಸಮಾಜ ಕಲ್ಯಾಣ ಇಲಾಖಾ ವತಿಯಿಂದ ಆಯ್ಕೆ ಮಾಡಲ್ಪಡುವ ಅಭ್ಯರ್ಥಿಗಳಿಗೆ ಯಾವುದೇ ರೀತಿ ಅಡಚಣೆ ಮಾಡದೆ ಸರ್ಕಾರ ನಿಗದಿಪಡಿಸಿರುವ ಶುಲ್ಕದೊಂದಿಗೆ ಪ್ರವೇಶ ನೀಡತಕ್ಕದ್ದು.
2. ಸರ್ಕಾರಿ ಕೋಟಾದಡಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳ ಪ್ರವೇಶ ನಿರಾಕರಿದಂತಹ ಸಂಸ್ಥೆಗಳಲ್ಲಿನ ಸರ್ಕಾರಿ ಕೋಟಾದ ಎದುರು ಸ್ಥಾನದಲ್ಲಿ ಆಡಳಿತ ಮಂಡಳಿಯಿಂದ ಪ್ರವೇಶ ನೀಡಿದಂತಹ ಅಭ್ಯರ್ಥಿಗಳ ಪ್ರವೇಶಕ್ಕೆ ಯಾವುದೇ ಕಾರಣಕ್ಕೂ ಅನುಮೋದನೆ ನೀಡಲಾಗುವುದಿಲ್ಲ.
3. ಸರ್ಕಾರಿ ಕೋಟಾದಲ್ಲಿ ಖಾಲಿ ಉಳಿದಿರುವ ಸೀಟುಗಳಿಗೂ ಆಡಳಿತ ಮಂಡಳಿಯು ಸರ್ಕಾರ ನಿಗಧಿಪಡಿಸಿರುವ ಮೀಸಲಾತಿಯನ್ನು ಕಡ್ಡಾಯವಾಗಿ ಅನುಸರಿಸಿ (ಜಿ.ಎಂ, ಎಸ್.ಸಿ ಎಸ್.ಟಿ ಮತ್ತು ಒ.ಬಿ.ಸಿ) ಪ್ರವೇಶ ನೀಡಿರಬೇಕು. ಮೀಸಲಾತಿ ಅನುಸರಿಸಿ ಪ್ರವೇಶ ನೀಡಲಾಗಿದೆಯೆ ಎಂಬುದನ್ನು ಖಚಿತಪಡಿಸಿಕೊಂಡು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯವು ಪ್ರವೇಶ ಪಟ್ಟಿಗೆ ಅನುಮೋದನೆ ನೀಡುವುದು.